of tanks, prepared from the year 1952 to December 15th, 1953;

(*b*) the number of works sanctioned and works completed?

A.—**Sri Kadidal MANJAPPA** (Minister for Revenue and Public Works).—

(*a*)	Repairs	3,548
	Construction	310
(*b*)	Sanctioned	3,542
	Completed	1,922

ಶ್ರೀ ಎ. ವಿ. ನರಸಿಂಹರೆಡ್ಡಿ.—1922 ಕೆಲಸಗಳು ಮುಗಿದಿವೆ ಎಂದು ತಿಳಿಸಿದ್ದೀರಿ, ಇವುಗಳಲ್ಲಿ ಹೊಸ ಕೆರೆಗಳ ಕೆಲಸಗಳೆಷ್ಟು?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರಗಳು ಈಗ ನನ್ನಲ್ಲಿಲ್ಲ; ಹೊಸ ಕೆರೆ ಕಾಮಗಾರಿಗಳೆಷ್ಟೆಂಬ ವಿವರಗಳನ್ನು ಕ್ಷಿಪ್ರಿಸುತ್ತಿದ್ದೇನೆ, ಕೆಲವು ದಿನಗಳಾದಮೇಲೆ ಕೊಡುತ್ತೇನೆ.

ಶ್ರೀ ಎ ವಿ. ನರಸಿಂಹರೆಡ್ಡಿ.—3858 ಕೆಲಸಗಳಿಗೆ ಅಂದಾಜು ತಯಾರಾಗಿದೆಯೆಂದು ಹೇಳಿದ್ದೀರಿ, ಇವುಗಳು ತಯಾರಾಗಿ ಎಷ್ಟು ದಿವಸವಾಯಿತು?

ಶ್ರೀ ಕಡಿದಾಳ್ ಮಂಜಪ್ಪ.—1952ನೆಯ ಇಸವಿಯ ನಂತರ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಕೆರೆ ರಿಪೇರಿ ಕೆಲಸಗಳಲ್ಲಿ, ತೂಬು ಮತ್ತು ಕೋಡಿ ರಿಪೇರಿ ಕೆಲಸ ಬೇಗ ಆಗತಕ್ಕದ್ದು, ಇದನ್ನು ನಿಘಾನ ಮಾಡುವುದರಿಂದ ಜನರಿಗೆ ಅನಾನುಕೂಲವಾಗುವುದಿಲ್ಲವೆ?

Sri Kadidal MANJAPPA.—It is obvious.

ಶ್ರೀ ಎ. ವಿ. ನರಸಿಂಹರೆಡ್ಡಿ.—ಇಂಥಾ ಕೆಲಸಗಳೆಷ್ಟು ಎಂಬುದನ್ನು ತಿಳಿದು ಅವುಗಳನ್ನು ಬೇಗ ಮಾಡಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಬೇಗ ಮಾಡಿಸ ಬೇಕೆಂದು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ತಿಳಿವಳಿಕೆ ಕೊಡಲಾಗಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಬೆಂಗಳೂರು ತಾಲ್ಲೂಕಿನಲ್ಲಿ ಯಾವುದಾದರೂ ಹೊಸ ಕೆರೆಗಳ ಕಾಮಗಾರಿಗಳನ್ನು ತೆಗೆದುಕೊಂಡಿದೆಯೆ?

ಶ್ರೀ ಕಡಿದಾಳ್ ಮಂಜಪ.—ನೋಟೀಸ್.

ಶ್ರೀ ಎ. ವಿ. ನರಸಿಂಹರೆಡ್ಡಿ.—ಚಳ್ಳಗಟ್ಟ ಕೆರೆಯ ಕೆಲಸ ಏನಾಗಿದೆ?

ಶ್ರೀ ಕಡಿದಾಳ್ ಮಂಜಪ್ಪ.—ನಾನೂ ನೋಡಿದ್ದೇನೆ, ಅಂದಾಜನ್ನು recast ಮಾಡಬೇಕೆಂದು ಹೇಳಿದ್ದೇನೆ, ಇನ್ನೂ ಬಂದಿಲ್ಲ. ಅಂದಾಜು ಚೀಫ್ ಇಂಜಿನಿಯರ ಆಫೀಸಿನಲ್ಲಿದೆ, ಅವರು scrutinise ಮಾಡುತ್ತಿದ್ದಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ತರಿಸಿ ಜಾಗ್ರತೆ ಮಂಜೂರು ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ತರಿಸುತ್ತೇನೆ.

Grant of Land to Mohamed Ghouse in Re-survey No. 129 of Udagani Village.

Q.—420. **Sri G. DUGGAPPA** (Holalkere—Scheduled Castes).—

Will the Government be pleased to state:—

(*a*) whether one Mohamed Ghouse is granted ten acres of land in the Re-survey No. 129 of Udagani village, Shikaripur taluk, Shimoga District;

(*b*) the date of the grant;

(*c*) whether it is an assessed waste, or gomal;

(i) if it is an assessed waste whether records were not built up showing it as gomal;

(ii) the Amount for which the land was sold;

(*d*) whether there was not one Allauddin, a Revenue Inspector, at that time in that hobli;

(*e*) whether it is a fact that he was chiefly instrumental to build up that record;

(*f*) whether the same Mohamed Ghouse applied for the same land previous to 1946-47;

(*g*) whether it is a fact that the land is situated within the Fort;

(*h*) whether it is a fact that the place is a place of pilgrimage as it is the birth place of Akkamahadevi?

A.—**Sri Kadidal MANJAPPA** (Minister for Revenue and Public Works).—

(*a*) Yes.

(*b*) 20th July 1950.

(*c*) No. The land is a "Hullubanni Kharab."

(i) Does not arise in view of reply to (*c*).

(ii) Rs. 20.

(*d*) to (*h*) As a revision petition in connection with the sale of this land is pending before Government it is not desirable to give any finding in the matter.

ಶ್ರೀ ಜಿ. ದುಗ್ಗಪ್ಪ.—ಶಿಕಾರಿಪುರದ ತಾಲ್ಲೂಕು ಉಡಗಣಿ ಗ್ರಾಮದ ನಕಾಸೆಯನ್ನು ರೆವೆನ್ಯೂ ಮಂತ್ರಿಗಳು ನೋಡಿದ್ದಾರೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ನೋಡಿರಬಹುದು; ಈಗ ನೆನಪಿಲ್ಲ.

ಶ್ರೀ ಜಿ. ದುಗ್ಗಪ್ಪ.—ನಕಾಸೆಯನ್ನು ನೋಡಿದ್ದರೆ ಈ ಹತ್ತು ಎಕರೆ ಜಮೀನು ಕೋಟೆ ಪ್ರದೇಶದೊಳಗಿದೆಯೆಂಬುದು ಗಮನಕ್ಕೆ ಬಂದಿದೆಯೆ?

Sri Kadidal MANJAPPA.—Sir, a revision petition is pending.

Mr. SPEAKER.—In view of the last sentence of the reply, the Hon'ble Member need not put any supplementaries.